**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**ಸಿ.ಸಿ. ನಂ. 1478/2023 ಫ್ರಾ.ಸಾ -3**

**ಚಾ.ಸಾ - 1**

**ದಿನಾಂಕಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಶಿವಣ್ಣ ನಿಂಗಪ್ಪ ರೆಡರೆಟ್ಟಿ |
| ತಂದೆಯ ಹೆಸರು | : | ನಿಂಗಪ್ಪ |
| ವಯಸ್ಸು | : | 30 ವರ್ಷ |
| ಉದ್ಯೋಗ | : | PSI |
| ವಾಸ ಸ್ಥಳ | : | ಅರಸೀಕೆರೆ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು 04.03.2023 ರಿಂದ 24.08.204 ರ ತನಕ ಶ್ರೀಮಂಗಲ ಪೊ.ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 18.09.2023 ರಂದು ಠಾಣೆಯಲ್ಲಿರುವಾಗ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಶ್ರೀಮಂಗಲ ಬಸ್ ನಿಲ್ದಾಣದ ಮುರುಳಿಯವರು ಭುವನೇಶ್ವರ ರವರ ಅಂಗಡಿ ಮುಂದೆ ಅಕ್ರಮವಾಗಿ ಗೋ ಮಾಂಸ ಮಾರಾಟ ಮಾಡಲು ಯಾರೋ ವ್ಯಕ್ತಿ ಬಂದಿದ್ದಾರೆ ಎಂದು ಖಚಿತ ಮಾಹಿತಿ ಮೇರೆಗೆ FIR ದಾಖಲಿಸಿರುತ್ತೇನೆ. ಇಲಾಖಾ ಜೀಪಿನಲ್ಲಿ ಚಾಸಾ 4 ರಿಂದ 6 ಮತ್ತು ನಾನು ಆಟೋ ರಿಕ್ಷಾ ನಿಲ್ದಾಣದ ಬಳಿ ಬಂದು ಚಾಸಾ 2 ಮತ್ತು 3 ರವರ ಮಾಹಿತಿ ನೀಡಿ ಪಂಚರಾಲು ಕೋರಿ ಅವರು ಒಪ್ಪಿದ್ದು ಮೇರೆಗೆ ಅವರಿಗೆ ನೋಟೀಸ್ ಜಾರಿ ಮಾಡಿ ಇಲಾಖಾ ಜೀಪಿನಲ್ಲಿ ಮುರುಳಿಯವರು ಭುವನೇಶ್ವರ ರವರ ಅಂಗಡಿ ಮುಂದೆ ಹೋಗಿ ಒಬ್ಬ ವ್ಯಕ್ತಿಯ ಪ್ಲಾಸ್ಟಿಕ್ ಚೀಲ ಇಟ್ಟುಕೊಂಡು ನಿಂತಿದ್ದು ಅವನ ಹೆಸರು ವಿಳಾಸ ಕೇಳಲಾಗಿ

ಆರೋಪಿ ಅವನ ಹೆಸರು ವಿಳಾಸ ತಿಳಿಸಿರುತ್ತಾನೆ. ಪ್ಲಾಸ್ಟಿಕ್ ಚೀಲವನ್ನು ನೋಡಲಾಗಿ 2 ಕೆ ಜಿ ಅಂತೆ ಒಟ್ಟು 4 ಪ್ಯಾಕೆಟ್‌ಗಳಿದ್ದು ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡು ಚಾಸಾ 7 ರವರಿಂದ ಭಾವಚಿತ್ರವನ್ನು ತೆಗೆಸಿರುತ್ತೇನೆ. ಮಹಜರ್ ಅನ್ನು 10.45 ರಿಂದ 11.45 ರ ತನಕ ಮಾಡಲಾಯಿತು.

ನಂತರ ಆರೋಪಿ ಹಾಗೂ ಮಾಲನ್ನು ಠಾಣೆಯಲ್ಲಿ ತೆಗೆದುಕೊಂಡು ಹೋಗಿ ಮಾಲು ಪಟ್ಟಿಯಲ್ಲಿ ಆಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆರೋಪಿಗೆ ಬಂದನ ಕ್ರಮ ಜರುಗಿಸಿ ನ್ಯಾಯಾಂಗ ಬಂದನಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಂತರ FSL ಗೆ ಗೋಮಾಂಸ ಕಳುಹಿಸಲು ಶ್ರೀಮಂಗಲ ಪಶು ವೈದ್ಯಾದಿಕಾರಿಗೆ ನಿವೇದನೆ ಮಾಡಿಕೊಂಡಿದ್ದು ಅವರಿಗೆ ಒಟ್ಟು 3 ಸ್ಯಾಂಪಲ್ ಗಳನ್ನು ಸಂಗ್ರಹಿಸಿ ನೀಡಿದ್ದು ಅದರಂತೆ ಮಾಲು ಪಟ್ಟಿಯಲ್ಲಿ ಆಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡು FSL ಗೆ ಕಳುಹಿಸಲು ಮನವಿ ಮಾಡಿಕೊಂಡಿರುತ್ತೇನೆ ಮತ್ತು ಉಳಿದ ಗೋ ಮಾಂಸವನ್ನು ನಾಶಮಾಡಲು ಸಹ ಮನವಿ ಮಾಡಿಕೊಂಡಿರುತ್ತೇನೆ. ಸಾಕ್ಷಿದಾರರುಗಳ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 11 ರವರಿಗೆ ವರ್ಗಾಯಿಸಿರುತ್ತೇನೆ.

ಸಾಕ್ಷಿಯು ಸ್ವ ವರದಿ, ಪ್ರ.ವ.ವರದಿ ಅನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ. ಪಿ 3 ಮತ್ತು 4 ಎಂದು ಸಹಿಗಳನ್ನು ನಿ. ಪಿ. 3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ ಪಿ 1 ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿ ಪಿ 1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ ಪಿ 2 ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಪಶುವೈದ್ಯಾದಿಕಾರಿಗಳು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 5 ಎಂದು, ಸಹಿಯನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ದೂರವಾಣಿ ಮೂಲಕ ಈ ಪ್ರಕರಣದ ಬಗ್ಗೆ ಮಾಹಿತಿ ಬಂತು. ಪ್ರಕರಣ ದಾಖಲಿಸಿ ತಕ್ಷಣ ಸ್ಥಳಕ್ಕೆ ಹೋದೆವು. ಕೃತ್ಯ ಸ್ಥಳ ಸಾರ್ವಜನಿಕ ಸ್ಥಳ ಎಂದರೆ ಸರಿ.ಅಲ್ಲಿ ಜನರು ಯಾವಾಗಲೂ ಇರುತ್ತಾರೆ ಎಂದರೆ ಸರಿ. ಮಾಂಸದ ಗ್ರಾಹಕರು ಅಲ್ಲಿ ಯಾರು ಕಂಡು ಬರಲಿಲ್ಲ. ಆರೋಪಿಯನ್ನು ನಾನು ಹಿಂದಿಯಲ್ಲಿ ಮಾತನಾಡಿಸಿದೆ. ಆರೋಪಿಯ ಬಳಿ 8 ಕೆ ಜಿ ಮಾಂಸವಾಗಿದ್ದು ಅದು ಮಾರಾಟ ಮಾಡುವ ಉದ್ದೇಶದಿಂದ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ತೂಕ ಮಾಡುವ ವಸ್ತುಗಳು ಅಲ್ಲಿ ಇರಲಿಲ್ಲ. ಫೋಟೋಗೂ, ಕೃತ್ಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇರುವುದಿಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ